INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -02,March-April, 2026
Page No,45-55
Peer -Reviewed, Refereed Journal

# ಆಧುನಿಕ ಭಾರತದ ನಿರ್ಮಾಣ: ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಸೈದ್ಧಾಂತಿಕ ಹೋರಾಟಗಳು

ಡಾ.ತೃಪ್ತಿ.ಹೆಚ್.ಪಿ.[1]

**ಸಾರಾಂಶ:**ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಆಧುನಿಕ ಭಾರತವನ್ನು ರೂಪಿಸುವ ಪರಸ್ಪರ ಸೈದ್ಧಾಂತಿ ಹೋರಾಟಗಳು ಮತ್ತು ಪೂರಕ ದೃಷ್ಟಿಕೋನಗಳನ್ನುಹೋಲಿಸಲಾತ್ತದೆ. ಈ ಇಬ್ಬರುಮಹಾನ್ ದಾರ್ಶನಿಕರ ದಾರ್ಶನಿಕತೆ, ಹೋರಾಟಗಳು ವಿಧಾನಗಳು ಮತ್ತು ನೀಡಿರುವಂತಹ ಆದ್ಯತೆಗಳಲ್ಲಿ ಇರುವ ಭಿನ್ನತೆಗಳನ್ನು ಸ್ಪಷ್ಟವಾಗಿ ವಿವರಿಸಲಾಗುವುದು.ಈ ಪ್ರಬಂಧವು ಗಾಂಧೀಜಿ ಅವರ ಅಹಿಂಸೆ, ಧಾರ್ಮಿಕ ಮೌಲ್ಯಗಳು, ಗ್ರಾಮೀಣ ಸ್ವಾವಲಂಬನೆ ಮತ್ತು ನೈತಿಕ ಪುನರುಜ್ಜೀವನದ ಮೇಲೆ ಹೆಚ್ಚು ಒತ್ತು ನೀಡುವ ನಿಲುವಿನೊಂದಿಗೆ, ಹಾಗೆಯೇ ಅಂಬೇಡ್ಕರ್ ಅವರ ಸಾಂವಿಧಾನಿಕತೆ, ಸಾಮಾಜಿಕ ನ್ಯಾಯ, ಜಾತಿ ನಿರ್ಮೂಲನೆ ಮತ್ತು ಕಾನೂನು ಸುಧಾರಣೆಗಳ ಮಹತ್ವವನ್ನು ಹೆಚ್ಚು ಸಮನ್ವಯಗೊಳಿಸುತ್ತದೆ. ಲಭ್ಯವಿರುವಅಧ್ಯಯನದ ಸಂಪನ್ಮೂಲಗಳ ಮೂಲಕ ಭಾರತೀಯ ಸಂದರ್ಭದಲ್ಲಿನ ಜಾತಿ, ಧಾರ್ಮಿಕ ಗುರುತು, ಆರ್ಥಿಕ ಮತ್ತು ಶೈಕ್ಷಣಿಕ ಮಾದರಿಗಳು ಹಾಗೂ ರಾಜಕೀಯ ಸಂಸ್ಥೆಗಳ ಮೇಲೆ ಅವರ ಪ್ರಭಾವವನ್ನು ಹೆಚ್ಚು ಹೆಚ್ಚು ವಿಶ್ಲೇಷಿಸುವುದು ಈ ಪ್ರಬಂಧದ ವೈಶಿಷ್ಟ್ಯತೆಯಾಗಿದೆ.ಪೂನಾ ಒಪ್ಪಂದದ ನಿರ್ಣಾಯಕ ಸಂಗಮಗಳನ್ನು ಪತ್ತೆಹಚ್ಚಿ, ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಸಾಮಾಜಿಕ ಸಮಾನತೆ ಕುರಿತ ಹೊಸ ಮಾದರಿಯ ಚರ್ಚೆಗಳೊಂದಿಗೆ ಅವುಗಳ ನೈತಿಕ ಮತ್ತು ಸಾಂಸ್ಥಿಕ ಚೌಕಟ್ಟಿನ ಪ್ರಭಾವವನ್ನು ವಿಶ್ಲೇಷಿಸುವುದು ಹೆಚ್ಚು ಮಹತ್ವದ ಅಂಶವಾಗಿರುತ್ತದೆ.ಇಂತಹ ಅಧ್ಯಯನವು ಗಾಂಧೀಜಿ ಅವರ ರಚನಾತ್ಮಕ ಮನವಿ ಮತ್ತು ಅಂಬೇಡ್ಕರ್ ಅವರ ನೈತಿಕ ಖಾತರಿಗಳ ಪರಸ್ಪರ ಕ್ರಿಯೆಯಿಂದ ಭಾರತವುಎದುರಿಸುತ್ತಿರುವಂತಹ ಸವಾಲುಗಳನ್ನು ಸಮರ್ಥವಾಗಿ ನ್ಯಾವಿಗೇಟ್ ಮಾಡಲು ಸಹಾಯ ಮಾಡುವ ಶ್ರೀಮಂತ ನಕ್ಷೆಯನ್ನು ನೀಡುತ್ತದೆ ಎಂಬ ವಾದವು ಅತ್ಯಂತ ಪ್ರಬಲವಾಗಿರುತ್ತದೆ.

**ಪ್ರಮುಖ ಪದಗಳು:**ಗಾಂಧೀಜಿ, ಅಂಬೇಡ್ಕರ್, ನವ ಭಾರತ, ಸಿದ್ಧಾಂತ, ಜಾತಿ, ಸಾಮಾಜಿಕ ನ್ಯಾಯ, ಅಭಿವೃದ್ಧಿ, ಪ್ರಜಾಪ್ರಭುತ್ವ, ಸಾಂವಿಧಾನಾತ್ಮಕತೆ, ಸಾಮಾಜಿಕ ಸಮಾನತೆ, ಸೈದ್ಧಾಂತಿಕ ಚೌಕಟ್ಟು

1.**ಸೋಸ್ಲೆ, ಗ್ರಾಮ & ಅಂಚೆ, ಟಿ.ನರಸೀಪುರ.ತಾ, ಮೈಸೂರು ಜಿಲ್ಲೆ.**

**ಭಾ**ರತೀಯ ಸ್ವಾತಂತ್ರ್ಯ ಚಳವಳಿಯ ಸೈದ್ಧಾಂತಿಕ ಮತ್ತು ಸಾಮಾಜಿಕ ಮುಖಾಂಶಗಳನ್ನು ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ದೃಷ್ಟಿಕೋನಗಳ ಮೂಲಕ ಸಾದರಪಡಿಸಲಾಗಿದೆ.ಸ್ವಾತಂತ್ರ್ಯ ಚಳವಳಿಯೂ ಕೇವಲ ಒಂದು ರಾಜಕೀಯ ಹೋರಾಟವಲ್ಲದೆ, ಅದು ಸಮಷ್ಠಿ ರಾಷ್ಟ್ರದ ಆತ್ಮ ಮತ್ತು ಮುಂದಿನ ಭವಿಷ್ಯವನ್ನು ಕುರಿತಂತೆನಡೆಸಿರುವ ಒಂದು ಸೈದ್ಧಾಂತಿಕ ಅಂಹಿಸಾತ್ಮಕ ಮತ್ತು ಸಾಂವಿಧಾನಿಕ ಸಂಘರ್ಷವಾಗಿತ್ತು.ಗಾಂಧೀಜಿಅವರ ದೃಷ್ಟಿಕೋನವು ಧಾರ್ಮಿಕ ಮಾನವತಾವಾದ, ಅಹಿಂಸೆ ಮತ್ತು ನೈತಿಕ ಪುನರುಜ್ಜೀವನದ ಮೇಲೆ ಆಧಾರಿತವಾಗಿದ್ದು, ಸ್ವರಾಜ್ ಮತ್ತು ಗ್ರಾಮಕೇಂದ್ರಿತ ಸ್ವಾವಲಂಬನೆಗಾಗಿ ಹೋರಾಡಿದರು.ಅಂಬೇಡ್ಕರ್ ಅವರ ದೃಷ್ಟಿಕೋನವು ಜಾತಿ ವ್ಯವಸ್ಥೆಯ ಸಂಪೂರ್ಣ ನಿರ್ಮೂಲನೆ, ಸಾಂಸ್ಥಿಕ ಮತ್ತು ಕಾನೂನು ಸುಧಾರಣೆಗಳ ಮೂಲಕ ಸಾಮಾಜಿಕ ನ್ಯಾಯ ಸಾಧನೆ ಮತ್ತು ಪ್ರಜಾಪ್ರಭುತ್ವದ ಬಲವರ್ಧನೆಗೆ ಹೆಚ್ಚು ಕೇಂದ್ರೀಕೃತವಾಗಿತ್ತು.ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಪರಸ್ಪರ ಭಿನ್ನವಾದ ಆದರ್ಶಗಳಿರುತ್ತವೆ. ಆದರೆ ಅವರ ಸಂವಾದ ಮತ್ತು ಒತ್ತಡದ ಮೂಲಕ ಆಧುನಿಕ ಭಾರತದ ರಾಜಕೀಯ–ಸಾಮಾಜಿಕ ಚೌಕಟ್ಟನ್ನು ರೂಪಿಸಿದ್ದು, ದೇಶದ ಗುರುತು, ಸಮಾನತೆ ಮತ್ತು ಪ್ರಗತಿಗೆ ದಿಕ್ಕು ನೀಡಿರುತ್ತವೆ.

## ಐತಿಹಾಸಿಕ ಹಿನ್ನೆಲೆ

ಬ್ರಿಟಿಷ್ ವಸಾಹತುಶಾಹಿಯ ಆಳ್ವಿಕೆಯು ಭಾರತೀಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಹೇಗೆ ಆಮೂಲಾಗ್ರ ಬದಲಾವಣೆಗಳನ್ನು ತಂದಿತು.ಇದೇಬ್ರಿಟಿಷ್ ಆಡಳಿತದಡಿಯಲ್ಲಿ ಭೂ ಸಂಬಂಧಿತವಾಗಿರುವ ಆದಾಯದ ವ್ಯವಸ್ಥೆಗಳ ಕಾರಣ ಮತ್ತು ಪರಿಣಾಮವಾಗಿ ಸಾಂಪ್ರದಾಯಿಕ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ ಮೂಲಭೂತವಾಗಿ ಬದಲಾಗಿದ್ದು, ರೈತರು ಸಾಲದ ಹೊರೆ, ಭೂ ಕಳೆತ ಮತ್ತು ಆರ್ಥಿಕ ಅನಿಶ್ಚಿತತೆಯ ಬಾಧೆ ಅನುಭವಿಸಿದರು.ಬ್ರಿಟಿಷ್ ಕೈಗಾರಿಕಾ ಉತ್ಪನ್ನಗಳ ಆಮದು ಭಾರತೀಯ ಹಸ್ತಕಲಾ ಹಾಗೂ ಕೈಗಾರಿಕಾ ಉದ್ಯೋಗಗಳಿಗೆ ಹಾನಿ ಮಾಡಿದ್ದು, ಅನೇಕ ಕುಶಲಕರ್ಮಿಗಳು ಜೀವನೋಪಾಯ ಕಳೆದುಕೊಂಡರು.ವಸಾಹತುಶಾಹಿ ಆಡಳಿತವು ಜಾತಿ ವ್ಯವಸ್ಥೆಯನ್ನು ಕಾನೂನು ಮತ್ತು ದಾಖಲೆಪತ್ರಗಳು ಮೂಲಕ ಕ್ರೋಡೀಕರಿಸಿ, ಸಾಮಾಜಿಕ ಚಲನೆ ಕುಂಠಿತವಾಯಿತು ಮತ್ತು ಭೂಸ್ವಾಮ್ಯ, ಶಿಕ್ಷಣ, ಅಧಿಕಾರದ ಅವಕಾಶಗಳು ಕೆಲವು ಜನವರ್ಗಗಳ ಕೈಯಲ್ಲಿ ಕೇಂದ್ರೀಕೃತವಾಗಿದ್ದವು.ಭೂಹೀನ ರೈತರು ಮತ್ತು ಕುಶಲಕರ್ಮಿಗಳು ಸಾಲದ ಬಡ್ಡಿದರ ಮತ್ತು ಶೋಷಕ ಹಣದಾತರಿಂದ ಸಂಕಷ್ಟಕ್ಕೀಡಾಗಿ, ಅವರ ಸಂಕಷ್ಟಗಳು ಧರ್ಮ, ಭಾಷೆ ಮತ್ತು ಪ್ರಾದೇಶಿಕ ಭೇದಗಳನ್ನು ಮೀರಿ ವ್ಯಾಪಕವಾಗಿದ್ದವು.ಈ ಆರ್ಥಿಕ ಮತ್ತು ಸಾಮಾಜಿಕ ಒತ್ತಡಗಳು ಸಾಮೂಹಿಕ ಅಸಮಾಧಾನಕ್ಕೆ ಕಾರಣವಾಗಿ, ಜನರನ್ನು ರಾಜಕೀಯ ಚಳವಳಿಗೆ ಒತ್ತಾಯಿಸಿದವು.ಗಾಂಧೀಜಿಅವರು ಅಹಿಂಸೆಯ ಮೂಲಕ

ಮತ್ತು ಅಂಬೇಡ್ಕರ್ ಅವರು ಸಾಂವಿಧಾನಿಕ ವಿಧಾನದ ಮೂಲಕ ಬ್ರಿಟಿಷ್ ಆಳ್ವಿಕೆಯ ಅಡಿಯಲ್ಲಿ ಏಕೀಕೃತಗೊಂಡ ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ಅನ್ಯಾಯಕ್ಕೆ ಈ ಬಗೆಯಲ್ಲಿನ ವಿಭಿನ್ನ ಮಾರ್ಗಗಳಲ್ಲಿ ಪ್ರತಿಪಾದಿಸಿ, ಪ್ರತಿಭಟಿಸಿ ಮತ್ತು ಪ್ರತಿಕ್ರಿಯೆಯಗಳನ್ನು ನೀಡಿದರು.ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳು ವಿಭಿನ್ನವಾದರೂ, ಈ ಇಬ್ಬರೂ ಸಾಮೂಹಿಕ ರಾಜಕೀಯ ಸಜ್ಜುಗೊಳಿಸುವಿಕೆಗೆ ಪ್ರೇರಣೆ ನೀಡಿದ್ದು, ಸ್ವಾತಂತ್ರ್ಯ ಚಳವಳಿಯನ್ನು ಹೆಚ್ಚು ಬಲಪಡಿಸಿತ್ತು.

## ಸೈದ್ಧಾಂತಿಕ ಮುಖಾಮುಖಿ ಮತ್ತು ಪ್ರತಿರೋಧದ ಎರಡು ಮಾರ್ಗಗಳು

ಗಾಂಧೀಜಿಅವರು ಅಹಿಂಸಾತ್ಮಕ ಸತ್ಯಾಗ್ರಹ ಮತ್ತು ನೈತಿಕ ಒತ್ತಡದ ಮೂಲಕ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸಾಮೂಹಿಕ ಜನಚಳವಳಿಯನ್ನು ಸಂಘಟಿಸಿದರು.ಅವರು ರಾಜಕೀಯ ಸ್ವಾತಂತ್ರ್ಯವನ್ನು, ಸಾಮಾಜಿಕ ಸುಧಾರಣೆಯನ್ನುಅಸ್ಪೃಶ್ಯತೆಯ ನಿರ್ಮೂಲನೆಯ ಜೊತೆಗೆ ಅತಿ ಗಾಢವಾಗಿಯೇ ಸಂಯೋಜಿಸಿದರು.ಅವರು ಜಾತಿ ವ್ಯವಸ್ಥೆಯ ಸಂಪೂರ್ಣ ಕಾನೂನುಬದ್ಧ ರದ್ಧತಿಯನ್ನು ಒತ್ತಾಯಿಸದೆ, ಸಾಮಾಜಿಕ ಬದಲಾವಣೆಯನ್ನು ನೈತಿಕ ಮನವಿ ಹಾಗೂ ಒಳಗೊಳ್ಳುವಿಕೆಯಿಂದ ಸಾಧಿಸಲು ನಂಬಿದರು.ಅಂಬೇಡ್ಕರ್ ಅವರು ಭಾರತೀಯ ನೆಲದ ಮೂಲನಿವಾಸಿ ಜನಸಮುದಾಯದ ಜೀವನಾನುಭವದಿಂದ ಪ್ರೇರಿತವಾಗಿ, ಕಾನೂನುಬದ್ಧ ಹಕ್ಕುಗಳು, ರಾಜಕೀಯ ಪ್ರತಿನಿಧಿತ್ವ ಮತ್ತು ಸಾಂಸ್ಥಿಕ ಭದ್ರತೆಗಳ ಅಗತ್ಯವನ್ನೇ ಪ್ರಮುಖವಾಗಿ ಪ್ರತಿಪಾದಿಸಿದರು.ಅವರು ಜಾತಿ ಪ್ರಭುತ್ವವನ್ನು ಸಂಪೂರ್ಣವಾಗಿಯೇ ನಿರ್ಮೂಲನೆಯನ್ನು ಮಾಡಲು ಹಿಂದೂ ಧರ್ಮಗ್ರಂಥಗಳ ವಿಮರ್ಶೆ ಮತ್ತು ಪ್ರತ್ಯೇಕ ಮತಕ್ಷೇತ್ರಗಳ ಬೇಡಿಕೆಯನ್ನು ಮುಂದಿಟ್ಟರು.1932ರ ಪೂನಾ ಒಪ್ಪಂದವೂಕೂಡ ಈ ಸೈದ್ಧಾಂತಿಕ ಸಂಘರ್ಷದ ತೀವ್ರತೆಗೆ ಸಾಕ್ಷಿಯಾಗಿದೆ.ಗಾಂಧೀಜಿಅವರ ಆಮರಣಾಂತ ಉಪವಾಸ ಮತ್ತು ಅಂಬೇಡ್ಕರ್ ಅವರ ಪ್ರತ್ಯೇಕ ಮತಕ್ಷೇತ್ರಗಳ ಹೋರಾಟದ ಈ ಮಾದರಿಯ ಎರಡು ಪರಿಕಲ್ಪನೆಗಳ ನಡುವಿನ ಸಮರವನ್ನು ಪ್ರತಿಬಿಂಬಿಸಿತು.ಅಂತಿಮವಾಗಿ ಜಂಟಿ ಮತಕ್ಷೇತ್ರಗಳಲ್ಲಿ ನಿಮ್ನಜನವರ್ಗಗಳ ಒಪ್ಪಿಗೆಯ ಮೂಲಕ ಒಪ್ಪಂದವೂ ಸಾಧ್ಯವಾಯಿತು.ಆದರೆ ಇದು ನಿಮ್ನಜನವರ್ಗಗಳ ರಾಜಕೀಯ ಸ್ವಾಯತ್ತತೆಯನ್ನು ಮಿತಿಗೊಳಿಸಿತು.ಈ ಘಟನೆಯು ನೈತಿಕ ಮನವಿ ಮತ್ತು ಕಾನೂನುಬದ್ಧ ಸುಧಾರಣೆಗಳ ನಡುವಿನ ಸಂಬಂಧ ಮತ್ತು ಪ್ರಭಾವದ ಕುರಿತು ಗಾಢ ಚರ್ಚೆಗಳನ್ನು ಉದ್ರಿಕ್ತಮಾಡಿತು. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಸಂಘರ್ಷವು ವೈಯಕ್ತಿಕ ಭಿನ್ನಾಭಿಪ್ರಾಯಕ್ಕಿಂತ ಹೆಚ್ಚು, ಪ್ರಾತಿನಿಧಿತ್ವ, ಗುರುತು ರಾಜಕೀಯ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಸ್ವಭಾವದ ಕುರಿತು ಆಳವಾದ ಸೈದ್ಧಾಂತಿಕ ಸಂವಾದವಾಗಿತ್ತು. ಇದರ ಕಾರಣ ಮತ್ತು ಪರಿಣಾಮಗಳು ಇಂದಿಗೂ ಭಾರತದ ಸಾಮಾಜಿಕ ಮತ್ತು ರಾಜಕೀಯ ಚರ್ಚೆಗಳಲ್ಲಿ ಸ್ಪಷ್ಟವಾಗಿರುತ್ತವೆ.

## ಗಾಂಧೀಜಿ ಅವರ ಸೈದ್ಧಾಂತಿಕ ಚೌಕಟ್ಟು

ಗಾಂಧೀಜಿ ಅವರ ರಾಜಕೀಯದ ಕೇಂದ್ರಬಿಂದುವೇ ಆಧ್ಯಾತ್ಮಿಕತೆಯಾಗಿರುತ್ತದೆ.ಅವರ ಪ್ರಕಾರ; ನೈತಿಕ ಮೌಲ್ಯಗಳಿಲ್ಲದ ರಾಜಕೀಯ ದಿಕ್ಕಿಲ್ಲದ ವ್ಯವಸ್ಥೆಯಾಗಿದೆ.ಭಗವತ್‌ಗೀತದ "ಆಸಕ್ತಿಯಿಲ್ಲದೆ ಕರ್ತವ್ಯ ನಿರ್ವಹಣೆ" ತತ್ವದ ಮೇಲೆ ಅವರು ಜೀವನ ನಡೆಸಿದರು.ಸ್ವರಾಜ್ ಎಂದರೆ; ಕೇವಲ ಬ್ರಿಟಿಷರಿಂದ ಬಿಡುಗಡೆಯೂ ಮಾತ್ರವಲ್ಲ; ಅದು ವ್ಯಕ್ತಿಯ ನೈತಿಕ–ಆಧ್ಯಾತ್ಮಿಕ ಸ್ವಾಯತ್ತತೆಯಾಗಿದೆ.ವ್ಯಕ್ತಿಯ ಒಳಗಿನ ಶುದ್ಧೀಕರಣದಿಂದಲೇ ಸಮಾಜ ಮತ್ತು ರಾಜ್ಯದಲ್ಲಿ ನ್ಯಾಯ ಸಾಧ್ಯ ಎಂದು ಗಾಂಧೀಜಿಅವರು ನಂಬಿದರು.ಈ ತತ್ವಗಳಿಗಾಗಿ ಅವರು ಶಬರಮತಿ ಆಶ್ರಮ ಮತ್ತು ಸೇವಾಗ್ರಾಮ್ ಆಶ್ರಮಗಳನ್ನು ಸ್ಥಾಪಿಸಿದರು.ಇಲ್ಲಿ ಸರಳ ಜೀವನ, ಪ್ರಾರ್ಥನೆ, ಖಾದಿ, ಆತ್ಮಪರಿಶೀಲನೆಗಳ ಮೂಲಕ ನೈತಿಕ ಜೀವನವನ್ನು ಅಭ್ಯಾಸ ಮಾಡಲಾಗುತ್ತಿತ್ತು.ಗಾಂಧೀಜಿಅವರ ಅಹಿಂಸಾ ಮಾರ್ಗವೂ ಕೇವಲ ಹಿಂಸೆ ಮಾಡದಿರುವುದು ಅಲ್ಲ; ಅದು ಪ್ರೀತಿ, ಕರುಣೆ ಮತ್ತು ಗೌರವದ ಜೀವನ ಮೌಲ್ಯವಾಗಿತ್ತು.ಈ ನೆಲೆ ಮತ್ತು ನೆಲೆಯಲ್ಲಿ ಅವರು ಸತ್ಯಾಗ್ರಹ (ಸತ್ಯಕ್ಕೆ ಅಂಟಿಕೊಳ್ಳುವ ಪ್ರತಿರೋಧ) ರೂಪಿಸಿದರು.ಬಲಪ್ರಯೋಗದ ಬದಲು ನೈತಿಕ ಶಕ್ತಿ, ಸ್ವಯಂ ಸಂಕಷ್ಟವನ್ನು ಸಹಿಸುವುದು, ದಮನಕಾರರ ಮನಸ್ಸನ್ನು ಬದಲಿಸುವ ಪ್ರಯತ್ನ, ಉಪವಾಸ, ಶಿಸ್ತು, ಸರಳ ಜೀವನ, ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್‌ನಿಂದ ಭಾರತದ ಚಂಪಾರಣ್ಯದತನಕ ಈ ವಿಧಾನವೂ ಹೆಚ್ಚು ಯಶಸ್ವಿಯಾಯಿತು. ಆ ಮೂಲಕ ಗಾಂಧೀಜಿಅವರು ತಮ್ಮ ಹೋರಾಟವನ್ನು ನೈತಿಕ ಚಳವಳಿಯಾಗಿ ರೂಪಿಸಿದರು.ಗಾಂಧೀಜಿ ಅವರ ಕನಸು ಪ್ರಧಾನವಾಗಿ; ಸ್ವಯಂ ಆಡಳಿತ ಗ್ರಾಮ ಗಣರಾಜ್ಯಗಳಾಗಿದ್ದವು.ಪ್ರತಿ ಗ್ರಾಮದಲ್ಲಿ ಚುನಾಯಿತ ಪಂಚಾಯತ್, ನ್ಯಾಯ, ಶಿಕ್ಷಣ, ಆರೋಗ್ಯ ವ್ಯವಸ್ಥೆ, ಸ್ಥಳೀಯ ಆಡಳಿತ, ಸ್ವಾವಲಂಬಿ ಆರ್ಥಿಕತೆ, ಖಾದಿ ಆರ್ಥಿಕ ಸ್ವಾತಂತ್ರ್ಯದ ಸಂಕೇತವಾಗಿತ್ತು. ವಿದೇಶಿವಸ್ತುಗಳಿಗೆ ಪ್ರಬಲ ವಿರೋಧ, ಗ್ರಾಮೀಣ ಉದ್ಯೋಗ ಮತ್ತು ಸರಳ ಜೀವನವಾಗಿತ್ತು. ಗಾಂಧೀಜಿ ಅವರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ; ಲಾಭವಲ್ಲ, ಮಾನವ ಘನತೆ, ಸಮಾನತೆ, ಪ್ರಕೃತಿಯೊಂದಿಗಿನ ಸಾಮರಸ್ಯ "ಆಧ್ಯಾತ್ಮಿಕ ರಾಜಕೀಯ"ದ ಮೂಲ ಅಂಶಗಳು, ವ್ಯಕ್ತಿಯ ನೈತಿಕ ಪರಿವರ್ತನೆ, ಅಹಿಂಸೆ ಮತ್ತು ಸತ್ಯಾಗ್ರಹ, ಸ್ವಾವಲಂಬಿ ಗ್ರಾಮ ಸ್ವರಾಜ್, ಮನುಷ್ಯಕೇಂದ್ರಿತ ಅಭಿವೃದ್ಧಿಯೂ ಅವರ ಆಶಯವಾಗಿತ್ತು. ಇತರರನ್ನು ಆಳುವ ಮೊದಲು ತಮ್ಮನ್ನು ತಾವು ಆಳಬಲ್ಲ ಸಮಾಜ ನಿರ್ಮಾಣವಾಗಬೇಕು ಎಂದು ಪ್ರಬಲವಾಗಿ ಪ್ರತಿಪಾದಿಸಿದವರು.

## ಅಂಬೇಡ್ಕರ್ ಅವರ ಸೈದ್ಧಾಂತಿಕ ಚೌಕಟ್ಟು

ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯನ್ನು ಕೇವಲ ಸುಧಾರಣೆಗೆ ಒಳಪಟ್ಟ ಸಾಮಾಜಿಕ ದೋಷವೆಂದು ನೋಡಲಿಲ್ಲ; ಅದು ಮೂಲತಃ ದಬ್ಬಾಳಿಕೆಯ ಸಂಸ್ಥೆಯಾಗಿದ್ದು ಸಂಪೂರ್ಣ ವಿನಾಶವನ್ನೇ ಬೇಡುತ್ತದೆ ಎಂದು ಅವರು ಪ್ರಬಲವಾಗಿಯೇ ವಾದಿಸಿದರು. 1936ರ ಅವರ ಪ್ರಸಿದ್ಧ ಕೃತಿ ಜಾತಿ

ನಿರ್ಮೂಲನೆಯಲ್ಲಿ ವರ್ಣಾಶ್ರಮ ಧರ್ಮದ ತತ್ವಶಾಸ್ತ್ರದಲ್ಲಿರುವ ಅಸಮಾನತೆಯ ಮೂಲವನ್ನು ಅವರು ತೀಕ್ಷ್ಣವಾಗಿ ಬಹಿರಂಗಪಡಿಸಿದರು.ಹಿಂದೂ ಧರ್ಮದೊಳಗೆ ಜಾತಿ ವ್ಯವಸ್ಥೆಯನ್ನು ಸುಧಾರಿಸಬಹುದು ಎಂಬ ಕಲ್ಪನೆಯನ್ನು ಅವರು ತಿರಸ್ಕರಿಸಿದರು.ಅವರ ದೃಷ್ಟಿಯಲ್ಲಿ ಅಗತ್ಯವಿದ್ದದ್ದು"ಪೂರ್ಣವಿರಾಮ".ಜಾತಿ ಆಧಾರಿತ ಶಾಸನ ಮತ್ತು ಪದ್ಧತಿಗಳನ್ನು ರದ್ದುಪಡಿಸುವುದುಅಸ್ಪೃಶ್ಯತೆಯ ಸಂಪೂರ್ಣ ನಿರ್ಮೂಲನೆಧರ್ಮ ಮತ್ತು ಸಂಪ್ರದಾಯಗಳಲ್ಲಿ ಬೇರೂರಿರುವ ಸವಲತ್ತುಗಳನ್ನು ಕಿತ್ತುಹಾಕುವುದು. ಅಂಬೇಡ್ಕರ್ ಅವರ ಪ್ರಕಾರ, ಕಾನೂನು ನಿಷೇಧ ಮಾತ್ರ ಸಾಕಾಗುವುದಿಲ್ಲ; ಅದನ್ನು ಶಿಕ್ಷಣ, ಸಾಮಾಜಿಕ ಸಜ್ಜುಗೊಳಿಸುವಿಕೆ ಮತ್ತು ಸ್ವಾಭಿಮಾನ ಚಳವಳಿಯೊಂದಿಗೆ ಸಂಯೋಜಿಸಬೇಕು. ಇಂತಹ ಸಮಗ್ರ ಕ್ರಮವೇ ಅಸ್ಪೃಶ್ಯರು ಮತ್ತು ಇತರ ಅಂಚಿನಲ್ಲಿರುವ ಜನಸಮುದಾಯಗಳ ಮೇಲಿನ ಕಳಂಕ ಮತ್ತು ರಚನಾತ್ಮಕ ಹೊರಗಿಡುವಿಕೆಯನ್ನು ನಿವಾರಿಸಬಹುದು.ಭಾರತದ ಸಂವಿಧಾನ ರಚನಾ ಸಭೆಯ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ಅವರು ತಮ್ಮ ಸಮಾನತೆಯ ದೃಷ್ಟಿಯನ್ನು ಬಲವಾದ ಕಾನೂನು ಚೌಕಟ್ಟಾಗಿ ರೂಪಿಸಿದರು. ಅವರುಇತಿಹಾಸಾತ್ಮಕ ಅನ್ಯಾಯಗಳನ್ನುಸರಿಪಡಿಸಿಸಮಾನ ಅವಕಾಶಗಳನ್ನು ಖಚಿತಪಡಿಸುವುದು.ಅವರು ಸಾರ್ವತ್ರಿಕ ವಯಸ್ಕ ಮತದಾನ, ಮೂಲಭೂತ ಹಕ್ಕುಗಳು,ಸಾಮಾಜಿಕ ನ್ಯಾಯಕ್ಕಾಗಿ ಮೀಸಲಾತಿ (ಸಕಾರಾತ್ಮಕ ತಾರತಮ್ಯ) ಶಿಕ್ಷಣ, ಉದ್ಯೋಗ ಮತ್ತು ಆಡಳಿತದಲ್ಲಿ ಪ್ರತಿನಿಧಿತ್ವದಂತಹ ಸಾಂವಿಧಾನಿಕ ತತ್ವಗಳನ್ನು ಹೆಚ್ಚು ಉತ್ತೇಜಿಸಿದರು.ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಸ್ವತಂತ್ರ ನ್ಯಾಯಾಂಗ ಮತ್ತು ಅಧಿಕಾರಗಳ ಸ್ಪಷ್ಟ ಪ್ರತ್ಯೇಕತೆ ಅಲ್ಪಸಂಖ್ಯಾತರ ರಕ್ಷಣೆಗೆ ಅಗತ್ಯವಾಗಿತ್ತು.ಕ್ರೋಢೀಕರಿಸಿದ ಸಂವಿಧಾನವು ಬಹುಸಂಖ್ಯಾತರ ದಬ್ಬಾಳಿಕೆಯನ್ನು ತಡೆಯುವ ಭದ್ರತಾ ವ್ಯವಸ್ಥೆಯಾಗುತ್ತದೆ ಎಂದು ಅವರು ನಂಬಿದರು.ಅವರ "ಸಾಂವಿಧಾನಿಕ ನೈತಿಕತೆ" ಎಂಬ ಪರಿಕಲ್ಪನೆ ಕೇವಲ ಕಾನೂನು ಪಾಲನೆಯಲ್ಲ; ಅದು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ರಾಜಕೀಯ ಸಂಸ್ಕೃತಿಯಾಗಿತ್ತು. ಅವರು ಸಮಾನ ಅವಕಾಶಗಳನ್ನು ಸೃಷ್ಟಿಸಲು ಸಕ್ರಿಯವಾಗಿ ಮಧ್ಯಪ್ರವೇಶಿಸುವ ಕಲ್ಯಾಣ ರಾಜ್ಯವನ್ನು ಕಲ್ಪಿಸಿದರು.ಅಂಬೇಡ್ಕರ್ ಅವರು ಆಧುನಿಕ ಶಿಕ್ಷಣ, ವೈಜ್ಞಾನಿಕ ಚಿಂತನೆ ಮತ್ತು ಕೈಗಾರಿಕೀಕರಣವನ್ನು ಅಸ್ಪೃಶ್ಯರ ವಿಮೋಚನೆಯ ಪ್ರಮುಖ ಸಾಧನಗಳೆಂದು ಹೆಚ್ಚು ಪರಿಗಣಿಸಿದರು.ಆಚರಣೆ, ಮೂಢನಂಬಿಕೆ ಮತ್ತು ಅಂಧ ಅನುಸರಣೆಗಳು ಸಾಮಾಜಿಕ ಅಧೀನತೆಯನ್ನು ಮುಂದುವರಿಸುತ್ತವೆ ಎಂದು ಅವರು ನಂಬಿದರು.ಆದ್ದರಿಂದಲೇ ಅವರುಪಾಶ್ಚಿಮಾತ್ಯ ಶೈಲಿಯ ಉನ್ನತ ಶಿಕ್ಷಣ, ವಿಮರ್ಶಾತ್ಮಕ ಚಿಂತನೆ, ಸ್ವಾಭಿಮಾನ ಮತ್ತು ಆತ್ಮಗೌರವ ವಿಜ್ಞಾನಾಧಾರಿತ ಸಮಾಜ ಇವುಗಳನ್ನು ಉತ್ತೇಜಿಸಿದರು.ಆರ್ಥಿಕವಾಗಿ, ಅವರು ರಾಜ್ಯ ನೇತೃತ್ವದ ಕೈಗಾರಿಕೀಕರಣವನ್ನು ಬೆಂಬಲಿಸಿದರು.ಇದು ಉದ್ಯೋಗ ಸೃಷ್ಟಿಸಿ ಗ್ರಾಮೀಣ ಬಡತನವನ್ನು ಕಡಿಮೆ ಮಾಡುತ್ತದೆ ಮತ್ತು ಜಾತಿ ಆಧಾರಿತ ವೃತ್ತಿ ಬಂಧನಗಳನ್ನು ದುರ್ಬಲಗೊಳಿಸುತ್ತದೆ ಎಂದು ಅವರು ನಂಬಿದರು.1956ರಲ್ಲಿ ಅವರು ಬೌದ್ಧಧಮ್ಮಕ್ಕೆಗೆ ಮರಳಿದ್ದು ಅವರ ತಾತ್ವಿಕ ಹಾದಿಯ ಶಿಖರವಾಗಿತ್ತು.ಈ

ಹೆಜ್ಜೆಯು ವಂಶಪಾರಂಪರ್ಯ ಸವಲತ್ತುಗಳಿಗಿಂತ ಸಮಾನತೆ, ತರ್ಕ ಮತ್ತು ನೀತಿಶಾಸ್ತ್ರವನ್ನು ಒತ್ತಿಹೇಳುವ ಧರ್ಮದತ್ತ ಸಾಗುವಿಕೆಯಾಗಿತ್ತು. ಅವರೊಂದಿಗೆ ಲಕ್ಷಾಂತರ ಅನುಯಾಯಿಗಳೂ ಮತಾಂತರಗೊಂಡದ್ದು ಸಾಮಾಜಿಕ ಕ್ರಾಂತಿಯ ಚಿಹ್ನೆಯಾಯಿತು. ಕಾನೂನು ಹಕ್ಕುಗಳು, ಶಿಕ್ಷಣ ಮತ್ತು ಆರ್ಥಿಕ ಅವಕಾಶಗಳ ಸಂಯೋಜನೆಯ ಮೂಲಕ ಅಂಬೇಡ್ಕರ್ ಅವರ ಆಧುನಿಕತಾವಾದಿ ದೃಷ್ಟಿಕೋನವು ಪರಂಪರೆಯಲ್ಲಿನ ಶ್ರೇಣಿಗಳನ್ನು ಮುರಿದು ಸಮಾನತೆಯ ಪೌರತ್ವ ಮತ್ತು ಅರ್ಹತೆಯ ಆಧಾರದ ಮೇಲೆ ಕಾರ್ಯನಿರ್ವಹಿಸುವ ಆದರ್ಶ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿತು. ಹೀಗಾಗಿ, ಅವರ ಚಿಂತನೆಗಳು ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಮತ್ತು ಮಾನವ ಗೌರವದ ಆಧುನಿಕ ಭಾರತೀಯ ಕಲ್ಪನೆಗೆ ಬಲವಾದ ಅಡಿಪಾಯವನ್ನು ಒದಗಿಸಿರುತ್ತವೆ.ಗಾಂಧೀಜಿ ಅವರು ರಾಜಕೀಯ ಸ್ವಾತಂತ್ರ್ಯದ ನೆಲೆಯಲ್ಲಿ ಮತ್ತು ಅಂಬೇಡ್ಕರ್ ಅವರು ಸಾಮಜಿಕ ಸ್ವಾತಂತ್ರ್ಯದ ನೆಲೆಯಲ್ಲಿ ಭಾರತೀಯ ಸಂದರ್ಭದಲ್ಲಿದ್ದಂತಹ ಜಾತಿ ಪದ್ಧತಿಯ ದಬ್ಬಾಳಿಕೆ ಮತ್ತು ವಸಾಹತುಶಾಹಿಯ ವಿರುದ್ಧ ಪ್ರಬಲವಾಗಿ ಹೋರಾಡಿದ ಮಹಾನ್ ನಾಯಕರು. ನ್ಯಾಯ, ಸ್ವಾಭಿಮಾನ ಮತ್ತು ಸಮಾನತೆಯಿಂದ ವಿಮೋಚನೆಗೊಂಡ ಭಾರತದ ಕನಸನ್ನು ಇಬ್ಬರೂ ಹಂಚಿಕೊಂಡಿದ್ದರೂ, ಆ ಗುರಿಯನ್ನು ಸಾಧಿಸುವ ಮಾರ್ಗಗಳು ಮತ್ತು ತತ್ವಗಳು ಬಹಳ ಭಿನ್ನವಾಗಿದ್ದವು.

ಗಾಂಧೀಜಿ ಮತ್ತು ಅಂಬೇಡ್ಕರ್ ಅವರಿಬ್ಬರೂ ನಾಯಕರು ಭಾರತದ ಸಾಮಾಜಿಕ ಪುನರುಜ್ಜೀವನಕ್ಕೆ ತಳಮಟ್ಟದ ಜನರ ಸಬಲೀಕರಣವೇ ಮೂಲ ಎಂದು ಒಪ್ಪಿಕೊಂಡಿದ್ದರು.ಅಸ್ಪೃಶ್ಯರು ಮತ್ತು ಅಂಚಿನಲ್ಲಿರುವ ಜನಸಮುದಾಯಗಳ ಉದ್ಧಾರವಿಲ್ಲದೆ ರಾಷ್ಟ್ರದ ನವೀಕರಣ ಸಾಧ್ಯವಿಲ್ಲ ಎಂಬುದರಲ್ಲಿ ಸಹಮತವಿತ್ತು. ಗಾಂಧೀಜಿ ಅವರು ಹಳ್ಳಿಗಳಲ್ಲಿ ಸತ್ಯಾಗ್ರಹವಿಧಾನ ಮತ್ತು ನೈತಿಕ ಉಪದೇಶಗಳ ಮೂಲಕ ಜನಚಳವಳಿಯನ್ನು ರೂಪಸೊದರು. ಅಂಬೇಡ್ಕರ್ ಅವರು ಪ್ರಜಾಸತ್ತಾತ್ಮಕ ವಿಧಾನದ ಹೋರಾಟಗಳು, ಸಾಂವಿಧಾನಾತ್ಮಕ ಮಾತುಕತೆ ಮತ್ತು ಅಸ್ಪೃಶ್ಯರ ಸಂಘಟನೆಯನ್ನು ಈ ಇಬ್ಬರೂ ಕೂಡ ಸ್ವಾತಂತ್ರ್ಯವನ್ನು ಕೇವಲ ರಾಜಕೀಯ ಬಿಡುಗಡೆಯಲ್ಲ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವೂ ಕೂಡ ಎಂದು ಕಲ್ಪಿಸಿಕೊಂಡರು. ಗಾಂಧೀಜಿ ಅವರು ಜಾತಿ ವ್ಯವಸ್ಥೆಯನ್ನು ಮೂಲ ವರ್ಣ ವ್ಯವಸ್ಥೆಯ ವಿಕೃತಿ ಎಂದು ನೋಡಿದರು, ಅದನ್ನು ಸುಧಾರಿಸಬಹುದು ಎಂದು ನಂಬಿದರು ಮತ್ತು ಹರಿಜನರ ಒಳಗೊಳ್ಳುವಿಕೆಯನ್ನು ಒತ್ತಿಹೇಳಿದರು. ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆಯನ್ನು ಶೋಷಣೆಯ ಯಂತ್ರವೆಂದು ಗುರುತಿಸಿ, ಸಂಪೂರ್ಣ ನಿರ್ಮೂಲನೆ ಅಗತ್ಯವೆಂದು ಹೇಳಿದರು.ಗಾಂಧೀಜಿ ಅವರು ಹಿಂದೂಧರ್ಮದ ಆಧ್ಯಾತ್ಮಿಕ ಸಾರವನ್ನು ಶುದ್ಧೀಕರಿಸಿ, ಸಾಮರಸ್ಯ ಸಾಧಿಸುವುದು ಸಾಧ್ಯವೆಂದು ಭಾವಿಸಿದರು.ಅಂಬೇಡ್ಕರ್ ಅವರು ಹಿಂದೂಧರ್ಮದ ಶ್ರೇಣೀಕೃತ ಆಚರಣೆಗಳನ್ನು ತೀವ್ರವಾಗಿ ವಿಮರ್ಶಿಸಿ,

ಸಮಾನತೆ ಮತ್ತು ತರ್ಕದ ಮೇಲೆ ಆಧಾರಿತ ಬೌದ್ಧಧರ್ಮಕ್ಕೆ ಹಿಂತಿರುಗುವ ಮೂಲಕ ಬದಲಾವಣೆ ಹೊಂದಿದರು.

ಗಾಂಧೀಜಿ ಅವರು ಖಾದಿ, ಗುಡಿ ಕೈಗಾರಿಕೆ ಮತ್ತು ಸ್ವಾವಲಂಬಿ ಗ್ರಾಮ ಗಣರಾಜ್ಯಗಳನ್ನು ಅಭಿವೃದ್ಧಿಯ ಮೂಲವೆಂದು ಕಂಡರು. ಅಂಬೇಡ್ಕರ್ ಅವರು ಕೈಗಾರಿಕೀಕರಣ, ನಗರೀಕರಣ ಮತ್ತು ರಾಜ್ಯ ಚಾಲಿತ ಅಭಿವೃದ್ಧಿಯನ್ನು ನಿಮ್ನವರ್ಗವರ್ಗಗಳ ಚಳವಳಿಯ ಮತ್ತು ರಾಷ್ಟ್ರೀಯ ಪ್ರಗತಿಯ ಸಾಧನವೆಂದು ಪರಿಗಣಿಸಿದರು.ಗಾಂಧೀಜಿ ಅವರು ನೈತಿಕ ನಾಯಕತ್ವ ಮತ್ತು ಅಹಿಂಸಾತ್ಮಕ ಪ್ರತಿರೋಧದ ಮೇಲೆ ಆಧಾರಿತ ರಾಜಕೀಯವನ್ನು ಅನುಸರಿಸಿದರು. ಅಂಬೇಡ್ಕರ್ ಅವರುಸಾಂವಿಧಾನಾತ್ಮಕ ಪ್ರಜಾಪ್ರಭುತ್ವ, ಕಾನೂನುಬದ್ಧ ಹಕ್ಕುಗಳು ಮತ್ತು ದೃಢ ಕ್ರಮಗಳ ಮೂಲಕ ಸಾಮಾಜಿಕ ನ್ಯಾಯ ಸಾಧಿಸುವತ್ತ ಗಮನ ಹರಿಸಿದರು.ಗಾಂಧೀಜಿ ಅವರು ಮೂಲಭೂತ ಸಾಕ್ಷರತೆ, ಕೈ ಕೆಲಸ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ಒತ್ತಿಹೇಳಿದರು.ಅಂಬೇಡ್ಕರ್ ಅವರು ಆಧುನಿಕ, ವೈಜ್ಞಾನಿಕ ಮತ್ತು ಉನ್ನತ ಶಿಕ್ಷಣವನ್ನು ಸಬಲೀಕರಣದ ಪ್ರಮುಖ ಸಾಧನವೆಂದು ಕಂಡರು.ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವಿನ ವ್ಯತ್ಯಾಸವು ಕೇವಲ ನೀತಿಗಳಲ್ಲ, ಅದು ಭಾರತದ ಭವಿಷ್ಯದ ಕುರಿತು ಎರಡು ವಿಭಿನ್ನ ಕಲ್ಪನೆಗಳ ಸಂಘರ್ಷವಾಗಿದೆ. ಗಾಂಧೀಜಿ ಅವರು ನೈತಿಕ ಪುನರುಜ್ಜೀವನದ ಮೂಲಕ ಸಮಾಜ ಪರಿವರ್ತನೆಗೆ ಒತ್ತು ನೀಡಿದರೆ, ಅಂಬೇಡ್ಕರ್ ರಚನಾತ್ಮಕ ಮತ್ತು ಕಾನೂನುಬದ್ಧ ಬದಲಾವಣೆಗಳ ಮೂಲಕ ಸಮಾನತೆ ಸಾಧಿಸುವುದನ್ನು ಮುಂಚೂಣಿಗೆ ತಂದರು.ಈ ಎರಡು ದೃಷ್ಟಿಕೋನಗಳು ಸೇರಿ ಆಧುನಿಕ ಭಾರತದ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಯ ಮಾರ್ಗವನ್ನು ರೂಪಿಸಿವೆ.

ಅಂಬೇಡ್ಕರ್ ಅವರು ಹಿಂದೂಧರ್ಮದ ಧರ್ಮಗ್ರಂಥಗಳಲ್ಲಿರುವಂತಹ ಜಾತಿ ಶ್ರೇಣೀಕರಣವನ್ನು ಕಾನೂನುಬದ್ಧಗೊಳಿಸಿ ಅಸ್ಪೃಶ್ಯತೆಯನ್ನು ದೈವಿಕ ನಿಯಮವಾಗಿ ನ್ಯಾಯೀಕರಿಸುತ್ತವೆ ಎಂದು ತೀವ್ರ ವಿಮರ್ಶಿಸಿದರು. ಈ ಬಗೆಯಲ್ಲಿನ ವಿಷಯವನ್ನು ಅಂಬೇಡ್ಕರ್ ಅವರು ತಮ್ಮ ಕೃತಿ ಜಾತಿ ನಿರ್ಮೂಲನೆಯಲ್ಲಿ ಧರ್ಮಗ್ರಂಥಗಳು ಸಮಾಜದಲ್ಲಿ ಅಸಮಾನತೆಯನ್ನು ಸ್ಥಿರಗೊಳಿಸುವುದನ್ನು ವಿಶ್ಲೇಷಿಸಿದರು.ಆದ್ದರಿಂದಲೇ 1956ನೆಯ ಅಕ್ಟೋಬರ್ 14ರಂದು ನಾಗ್ಪುರದಲ್ಲಿ ಬೌದ್ಧಧಮ್ಮಕ್ಕೆ ಸಾಮೂಹಿಕ ಮತಾಂತರ ಮಾಡಿ, ಶ್ರೇಣೀಕೃತ ನಂಬಿಕೆಗಳ ತಿರಸ್ಕಾರ ಮತ್ತು ಸಮಾನತೆಯ ಆಧಾರಿತ ಧರ್ಮದ ಆಯ್ಕೆ ಮೂಲಕ ಹೊಸ ನೈತಿಕ ಜನಸಮುದಾಯದ ನಿರ್ಮಾಣವನ್ನು ನಡೆಸಿದರು.ಅವರ ದೃಷ್ಟಿಯಲ್ಲಿ ಧರ್ಮವು ಮಾನವ ಗೌರವ ಮತ್ತು ಸಮಾನತೆಯನ್ನು ಉತ್ತೇಜಿಸಬೇಕು; ದೋಷಪೂರ್ಣ ಧರ್ಮವನ್ನು ತೊರೆದು ಬದಲಿಗೆ ಸಮಾನತೆ ಮತ್ತು ತರ್ಕಾಧಾರಿತ ಧರ್ಮವನ್ನು ಸ್ವೀಕರಿಸಬೇಕು.

ಗಾಂಧೀಜಿ ಅವರು ಹಿಂದೂಧರ್ಮದ ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಹೊಂದಿ, ವರ್ಣಾಶ್ರಮ ಧರ್ಮವನ್ನು ಸಂಪೂರ್ಣ ತಿರಸ್ಕರಿಸಲಿಲ್ಲ; ಅದು ವಿಕೃತಗೊಂಡಿದ್ದು, ಅದರ ದುರುಪಯೋಗವನ್ನು ನಾಶ

ಮಾಡಬೇಕೆಂದು ಭಾವಿಸಿದರು.ಅಸ್ಪೃಶ್ಯತೆಯನ್ನು ನಾಶ ಮಾಡುವುದೇ ಮುಖ್ಯ, ಆದರೆ ಮೂಲ ವರ್ಣ ವ್ಯವಸ್ಥೆ ನ್ಯಾಯಸಮ್ಮತವಾಗಿರಬಹುದು ಎಂದು ನಂಬಿದರು.ಅಸ್ಪೃಶ್ಯ ಜನವರ್ಗದವರನ್ನು "ಹರಿಜನರು" ಎಂದೂ ಕರೆಯುತ್ತಾರೆ, ಅವರನ್ನು ಸಮಾಜದಲ್ಲಿ ಒಳಗೊಂಡು ಶುದ್ಧೀಕರಣದ ಕೆಲಸಗಳನ್ನು ಕೈಗೊಂಡರು.ಗಾಂಧೀಜಿ ಅವರು ಧಾರ್ಮಿಕ–ನೈತಿಕ ವಿಧಾನಗಳ ಮೂಲಕ ಪ್ರಾರ್ಥನೆ, ಅಂತರ್–ಭೋಜನ, ದೇವಾಲಯ ಪ್ರವೇಶ ಹೋರಾಟಗಳಲ್ಲಿ ಮೇಲ್ಜಾತಿಗಳ ಮನಸ್ಸು ಬದಲಿಸುವ ಮೂಲಕ ಸಮಾಜವನ್ನು ಒಳಗಿನಿಂದ ಶುದ್ಧೀಕರಿಸುವುದನ್ನು ಒತ್ತಿಹೇಳಿದರು. ಅಂಬೇಡ್ಕರ್ ಅವರು ಈ ಹರಿಜನ ಎನ್ನುವ ಪದದ ಅರ್ಥಪೂರ್ಣತೆಯನ್ನು ಕಳೆದುಕೊಂಡು, ಕೇವಲ ಹೆಸರು ಬದಲಾವಣೆಯಿಂದ ಸಮಾನತೆ ಸಾಧ್ಯವಿಲ್ಲ ಎಂದು ಟೀಕಿಸಿದರು.ಧಾರ್ಮಿಕ ಸಹಾನುಭೂತಿ ಬದಲಾಯಿಸುವುದರಿಂದಲೇ ಹಕ್ಕುಗಳು ಬದಲಾಗುವುದಿಲ್ಲ; ಕಾನೂನು ಹಕ್ಕುಗಳು, ಶಿಕ್ಷಣ ಮತ್ತು ಆರ್ಥಿಕ ಶಕ್ತಿ ಮುಖ್ಯವಷ್ಟೇ ಎಂದು ಹೇಳಿದರು.ನೈತಿಕ ಮನವಿ ಅಲ್ಲ, ಕಾನೂನುಬದ್ಧ, ರಚನಾತ್ಮಕ ಬದಲಾವಣೆಗಳು ಅಗತ್ಯವೆಂದು ಒತ್ತಿಹೇಳಿದರು. ಗಾಂಧೀಜಿ ಅವರು ಧರ್ಮದೊಳಗಿನ ಸುಧಾರಣೆ, ಆಧ್ಯಾತ್ಮಿಕ ಪುನರುಜ್ಜೀವನ ಮೂಲಕ ಸಮಾಜ ಪರಿವರ್ತನೆ. ಅಂಬೇಡ್ಕರ್ ಅವರು ಅನ್ಯಾಯಕರ ಧರ್ಮದಿಂದ ಸಂಪೂರ್ಣವಿರಾಮ, ಕಾನೂನು ಮತ್ತು ಶೈಕ್ಷಣಿಕ ಕ್ರಾಂತಿಯ ಮೂಲಕ ಸಮಾನತೆಸಾಧನೆ. ಈ ಬಗೆಗಿನ ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಭಿನ್ನಾಭಿಪ್ರಾಯಗಳು ಭಾರತೀಯ ಸಮಾಜದ ಜಾತಿ–ಧರ್ಮ ವಿಷಯದ ಸುಧಾರಣೆಯ ದಾರಿಗಳಲ್ಲಿ ಎರಡು ಪ್ರಮುಖ ಪರಿಕಲ್ಪನೆಗಳನ್ನು ಪ್ರತಿಬಿಂಬಿಸುತ್ತವೆ.

**ಸಮಕಾಲೀನ ಪ್ರಾಸಕ್ತತೆ ಮತ್ತು ಇಂದಿನ ಭಾರತದ ಸಾರ್ವಜನಿಕ ಚರ್ಚೆಗಳು**

ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಪರಂಪರೆಗಳು ಇಂದಿಗೂ ಭಾರತದ ಸಮಾಜ ಮತ್ತು ರಾಜಕೀಯದಲ್ಲಿ ದೇವಾಲಯ ಪ್ರವೇಶ ಹೋರಾಟಗಳು, ಧಾರ್ಮಿಕ ಮತಾಂತರ ಮತ್ತು ವಿರೋಧ ವಿವಾದಗಳು, ಮೀಸಲಾತಿ ಮತ್ತು ಸಾಮಾಜಿಕ ನ್ಯಾಯದ ನೀತಿಗಳು, ಗುರುತಿನ ರಾಜಕೀಯ ಮತ್ತು ಹಕ್ಕು ಚಳವಳಿಗಳು ಸದಾ ಜೀವಂತವಾಗಿವೆ. ಗಾಂಧೀಜಿ ಅವರು ಅಂತರಧರ್ಮ ಸಮನ್ವಯ ಮತ್ತು ಸಂವಾದವನ್ನು ಉತ್ತೇಜಿಸುವ ಮೂಲಕ ಸಾಮಾಜಿಕ ಸಮ್ಮಿಲನ ಹಾಗೂ ಪರಸ್ಪರ ಗೌರವವನ್ನು ನೆಲೆಸಿಸಲು ಶ್ರಮಿಸಿದರು.ಅಂಬೇಡ್ಕರ್ ಅವರು ಕಾನೂನುಬದ್ಧ ಹಕ್ಕುಗಳ ಅಡಿಯಲ್ಲಿ ಗುರುತಿನ ಆಧಾರಿತ ರಾಜಕೀಯವನ್ನು ಬಲಪಡಿಸಿ, ಸಮಾನತೆ ಮತ್ತು ನ್ಯಾಯವನ್ನು ಕಾನೂನಿನ ಮೂಲಕ ಸಾಧಿಸುವತ್ತ ಗಮನಹರಿಸಿದರು.ಗಾಂಧೀಜಿ ಅವರು ಅನ್ಯಾಯಕರ ಜನಸಂಪ್ರದಾಯಗಳನ್ನು ಒಳಗಿನಿಂದ ಶುದ್ಧೀಕರಿಸುವ ಮೂಲಕ ಸಮಾಜವನ್ನು ಬದಲಾಯಿಸಬಹುದು ಎಂದು ನಂಬಿದರು.ಅಂಬೇಡ್ಕರ್ ಅವರು ಸಮಾನತೆಗೆ ಹೊಸ ನೈತಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಅಗತ್ಯವಿದೆ ಎಂದು ಒತ್ತಿಹೇಳಿದರು.ಈ ಎರಡು ವಿಭಿನ್ನ

ದಾರಿಗಳ ಮಧ್ಯೆ ಇರುವ ಉದ್ವಿಗ್ನತೆ ಮತ್ತು ಚರ್ಚೆಗಳು ಭಾರತದ ಆಧುನಿಕ ಸಮಾಜೋ–ರಾಜಕೀಯ ಚರಿತ್ರೆಯ ಭೂಪಟದಲ್ಲಿ ಪ್ರಮುಖ ಸ್ಥಾನವನ್ನು ಕಾಯ್ದುಕೊಂಡಿರುತ್ತವೆ.

## ರಾಷ್ಟ್ರ ನಿರ್ಮಾಣದ ರಾಜಕೀಯ ಹಾದಿಗಳು

ಗಾಂಧೀಜಿ ಅವರು ಸ್ವರಾಜ್ಯ ಎಂದರೆ; ಕೇವಲ ಬ್ರಿಟಿಷ್ ಆಡಳಿತದಿಂದ ಬಿಡುಗಡೆ ಮಾತ್ರವಲ್ಲ, ಅದು ಸ್ವಯಂ ನಿಯಂತ್ರಣ, ನೈತಿಕ ಪುನರ್ಜನ್ಮ ಮತ್ತು ಸಾಂಸ್ಕೃತಿಕ ಪುನರುತ್ಥಾನ.ಸಮಾಜವು ಸ್ವಯಂ–ಶಿಸ್ತಿನ ವ್ಯಕ್ತಿಗಳಿಂದ ಕೂಡಿರಬೇಕು; ಆಂತರಿಕ ನೈತಿಕ ಪರಿವರ್ತನೆಯ ಮೇಲೆ ಆಧಾರಿತ ಆಡಳಿತ.ಅಹಿಂಸೆ, ಸತ್ಯದ ಮೌಲ್ಯಗಳು ಮತ್ತು ವಿಕೇಂದ್ರೀಕೃತ ಆಡಳಿತ ಮಾದರಿ.ಪ್ರಜಾಪ್ರಭುತ್ವ ಹಳ್ಳಿಗಳಿಂದ ಆರಂಭವಾಗಬೇಕು; ಗ್ರಾಮ ಪಂಚಾಯತ್‌ಗಳು ಸ್ಥಳೀಯ ಸ್ವ–ಆಡಳಿತದ ಕೇಂದ್ರವಾಗಬೇಕು."ಗ್ರಾಮ ಗಣರಾಜ್ಯ" ಎಂಬ ಕಲ್ಪನೆ ಮೂಲಕ ಕಡಿಮೆ ರಾಜ್ಯ ಹಸ್ತಕ್ಷೇಪ ಮತ್ತು ಸಮಾನ ಪಾಲ್ಗೊಳ್ಳುವಿಕೆಯನ್ನು ಒತ್ತಿಹೇಳಿದರು.ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವು ಕೇವಲ ನೈತಿಕ ಮನೋಭಾವವಲ್ಲ; ಅದು ಸಂಸ್ಥೆಗಳ ಮೂಲಕ ಕಾರ್ಯನಿರ್ವಹಿಸುವ ವ್ಯವಸ್ಥೆ.ಲಿಖಿತ ಸಂವಿಧಾನ, ಸ್ವತಂತ್ರ ನ್ಯಾಯಾಂಗ, ಅಲ್ಪಸಂಖ್ಯಾತರ ರಕ್ಷಣೆ ಮತ್ತು ಸಕಾರಾತ್ಮಕ ಕ್ರಮಗಳು (ಮೀಸಲಾತಿ) ಅವಶ್ಯಕ.ಸಾರ್ವತ್ರಿಕವಯಸ್ಕರ ಮತದಾನ ಮತ್ತು ಹಕ್ಕುಗಳ ರಾಜ್ಯ.ರಾಜಕೀಯ ಸಮಾನತೆ ಇಲ್ಲದೆ ಸಾಮಾಜಿಕ ಸಮಾನತೆ ಸಾಧ್ಯವಿಲ್ಲ. ಶಿಕ್ಷಣ ಮತ್ತು ಕಾನೂನು ಮೂಲಕ ಸಬಲೀಕರಣವೂ ಜಾಗೃತಿ, ಸ್ವಾಭಿಮಾನಮತ್ತುಹಕ್ಕುಗಳ ಜಾರಿ. ಅಂಬೇಡ್ಕರ್ ಅವರುಅಸ್ಪೃಶ್ಯರ ಸ್ವಾಯತ್ತ ರಾಜಕೀಯಕ್ಕಾಗಿ ಪ್ರತ್ಯೇಕ ಮತದಾರರ ಹಕ್ಕುಗಳನ್ನು ಬಯಸಿದರು.ಗಾಂಧೀಜಿಅವರು ಇದಕ್ಕೆ ವಿರೋಧಿಸಿ, ಇದು ರಾಷ್ಟ್ರೀಯ ಏಕತೆಗೆ ಧಕ್ಕೆ ಎಂದು ಭಾವಿಸಿದರು.ಸ್ವಾತಂತ್ರ್ಯಅನಂತರ ರೂಪುಗೊಂಡ ಭಾರತದಲ್ಲಿ ಗಾಂಧೀಜಿ ಅವರ ಸ್ಥಳೀಯ ಸ್ವ–ಆಡಳಿತದ ಕಲ್ಪನೆ, ಅಂಬೇಡ್ಕರ್ ಅವರ ಕಾನೂನು ಸಮಾನತೆಯ ಭರವಸೆಯಂತಹ ಈ ಸಂಯೋಜನೆಯೂ ಭಾರತದ ಸಂಸದೀಯ ಪ್ರಜಾಪ್ರಭುತ್ವದ ಆಧಾರವಾಗಿದೆ.

## ಶಿಕ್ಷಣ, ಆರ್ಥಿಕತೆ ಮತ್ತು ಅಭಿವೃದ್ಧಿ

ಗಾಂಧೀಜಿ ಅವರು ಕರಕುಶಲ ಶಿಕ್ಷಣದಲ್ಲಿ ಕೈಗಲಸುಮತ್ತು ಶ್ರಮದ ಮೂಲಕ ಮೂಲಭೂತ ಶಿಕ್ಷಣ.ಬೌದ್ಧಿಕ ಹಾಗೂ ದೈಹಿಕ ಶ್ರಮದ ಸಮತೋಲನ, ನೈತಿಕ ಮೌಲ್ಯಗಳ ಬೆಳವಣಿಗೆ.ಇದು ಒಬ್ಬ ವ್ಯಕ್ತಿಯಲ್ಲಿ ಸ್ವಾವಲಂಬಿ ಗ್ರಾಮ ಸಮಾಜ ನಿರ್ಮಾಣವಾಗುತ್ತದೆ.ಅಂಬೇಡ್ಕರ್ ಅವರು ಆಧುನಿಕ, ತಾಂತ್ರಿಕ, ಉನ್ನತ ಶಿಕ್ಷಣ, ವಿಜ್ಞಾನ, ಕಾನೂನು, ಸಾಮಾಜಿಕವಿಜ್ಞಾನ. ಶಿಕ್ಷಣವೇ ಶೋಷಿತ ಜನವರ್ಗದವರ ವಿಮೋಚನೆಯ ಮುಖ್ಯ ಸಾಧನವಾಗಿರುತ್ತದೆ.ಆದ್ದರಿಂದಲೇ ಸಾಮಾಜಿಕ ಚಲನಶೀಲತೆ ಮತ್ತು ಹಕ್ಕುಗಳ ಅರಿವು ಮೂಡುತ್ತದೆ.ಗಾಂಧೀಜಿ ಅವರು ಸ್ವಾವಲಂಬಿ ಗ್ರಾಮ ಆರ್ಥಿಕತೆ, ಖಾದಿ ಮತ್ತು ಗುಡಿ ಕೈಗಾರಿಕೆ, ಸಣ್ಣ ಪ್ರಮಾಣದ, ಪರಿಸರ ಸ್ನೇಹಿ, ಸಮುದಾಯ ಆಧಾರಿತ ಉತ್ಪಾದನೆ, ದೊಡ್ಡ ಕೈಗಾರಿಕೀಕರಣ ಮತ್ತು

ಬಂಡವಾಳಶಾಹಿಯನ್ನು ತಿರಸ್ಕಾರವಾಗಿತ್ತು.ಅಂಬೇಡ್ಕರ್ ಅವರು ಕೈಗಾರಿಕೀಕರಣ ಮತ್ತು ನಗರೀಕರಣ ಅಗತ್ಯ.ಉದ್ಯೋಗಗಳು, ಆದಾಯ, ಮತ್ತು ಸಾಮಾಜಿಕ ಚಲನಶೀಲತೆಗಾಗಿ ರಾಜ್ಯ ನೇತೃತ್ವದ ಆಧುನೀಕರಣ.ಕಾರ್ಮಿಕ ಹಕ್ಕುಗಳು, ಯೋಗ್ಯ ವೇತನ, ಸುರಕ್ಷಿತ ಕೆಲಸದ ಪರಿಸ್ಥಿತಿಯಾಗಿರುತ್ತದೆ. ಗಾಂಧೀಜಿ ಅವರು ತಳಮಟ್ಟದ, ಕರಕುಶಲ ಆಧಾರಿತ ಗ್ರಾಮಪುನರ್‌ನಿರ್ಮಾಣ. ಅಂಬೇಡ್ಕರ್ ಅವರು ಶಿಕ್ಷಣ, ಕಾನೂನು, ಕೈಗಾರಿಕೀಕರಣದ ಮೂಲಕ ಸಾಂಸ್ಥಿಕ ಬದಲಾವಣೆಯಾಗುತ್ತು. ಅಹಿಂಸೆ, ಸ್ವಾವಲಂಬನೆ, ಪರಿಸರ ಸಂರಕ್ಷಣೆ (ಚಿಪ್ಕೋ, ನರ್ಮದಾ ಬಚಾವೋ), ಭ್ರಷ್ಟಾಚಾರ ವಿರೋಧಿ ಜನಚಳುವಳಿ (ಅಣ್ಣಾ ಹಜಾರೆ), ಸ್ಥಳೀಯ ಸ್ವ–ಆಡಳಿತ (ಪಂಚಾಯತ್ ರಾಜ್)ದಂತಹ ಅಂಶಗಳ ಮೇಲೆ ಗಾಂಧೀಜಿ ಅವರ ಪ್ರಭಾವವು ಪ್ರಖರವಾಗಿದೆ. ಕಾನೂನು, ಸಂವಿಧಾನ ಮತ್ತು ಸಾಮಾಜಿಕ ನ್ಯಾಯ, ಮೀಸಲಾತಿ, ಸಕಾರಾತ್ಮಕ ಕ್ರಮಗಳು, ಶೋಷಿತರ ಹಕ್ಕುಗಳ ರಾಜಕೀಯ, ಕಠಿಣ ಜಾತಿ ದೌರ್ಜನ್ಯ ಕಾನೂನುಗಳು ಮತ್ತು ನ್ಯಾಯಾಂಗ ರಕ್ಷಣೆಯಲ್ಲಿ ಅಂಬೇಡ್ಕರ್ ಅವರ ಪ್ರಭಾವವೂ ಹೆಚ್ಚಿರುತ್ತದೆ.ಗಾಂಧೀಜಿ ಅವರುನೈತಿಕ ಜಾತ್ಯತೀತತೆ, ಅಂತರ್ಧರ್ಮೀಯ ಸಾಮರಸ್ಯವನ್ನು ಮತ್ತು ಅಂಬೇಡ್ಕರ್ ಅವರು ಕಾನೂನುಬದ್ಧ, ಕಾರ್ಯವಿಧಾನದ ಜಾತ್ಯತೀತತೆ, ಕಾನೂನಿನಮುಂದೆಸಮಾನತೆಯ ಪ್ರಬಲ ಪ್ರತಿಪಾದಕರಾಗಿದ್ದರು.ಆರ್ಥಿಕ ಅಸಮಾನತೆ, ಗುರುತಿನ ರಾಜಕೀಯ, ಜಾತಿ–ಸಾಮಾಜಿಕ ಭೇದಭಾವ, ಪರಿಸರ ಸಂಕಟ, ಗಾಂಧೀವಾದಿ ನೈತಿಕ ಶಕ್ತಿ ಮತ್ತು ಅಂಬೇಡ್ಕರ್ ಅವರ ರಚನಾತ್ಮಕ ಕಾನೂನು ಬದಲಾವಣೆಗಳ ಸಂಯೋಜನೆ ಅಗತ್ಯವಾಗಿದೆ. ಏಕೆಂದರೆ; ಗಾಂಧೀಜಿ ಅವರು ನೈತಿಕಪುನರುಜ್ಜೀವನದಸಂಕೇತ ಮತ್ತು ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯದ ಸಾಂವಿಧಾನಿಕ ಶಿಲ್ಪಿಯಾಗಿದ್ದಾರೆ.ಆದ್ದರಿಂದಲೇ ಈ ಎರಡರ ಪರಂಪರೆಗಳು ಆಧುನಿಕ ಭಾರತದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಚರ್ಚೆಗಳ ಮೂಲಾಧಿಕಾರಿಯಾಗಿವೆ.

**ಅಂತಿಮ ಸಾರ:** ಆಧುನಿಕ ಭಾರತದ ನಿರ್ಮಾಣವನ್ನು ಅರ್ಥಮಾಡಿಕೊಳ್ಳಲು ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ವಿಭಿನ್ನವಾಗಿದ್ದಾರೆ. ಆದರೆ, ಗಾಂಧೀಜಿ ಅವರ ದೃಷ್ಟಿಯು ಅಹಿಂಸೆ, ಸತ್ಯ, ಸ್ವಾವಲಂಬನೆ ಮತ್ತು ಸ್ವರಾಜ್ಯದ ಮೂಲಕ ನೈತಿಕ ಮತ್ತು ಆಧ್ಯಾತ್ಮಿಕ ಪರಿವರ್ತನೆಗೆ ಒತ್ತು ನೀಡಿದರು.ಗ್ರಾಮ ಸ್ವರಾಜ್ ಮತ್ತು ಭಾಗವಹಿಸುವ ಪ್ರಜಾಪ್ರಭುತ್ವದ ಮೂಲಕ ನ್ಯಾಯಯುತ ಸಮಾಜಕ್ಕಾಗಿ ನೈತಿಕ ನಾಗರಿಕರನ್ನು ರೂಪಿಸುವುದು ಮುಖ್ಯ ಎಂದು ನಂಬಿದರು.ಅಂಬೇಡ್ಕರ್ ಅವರ ದೃಷ್ಟಿಯು ಸಂವಿಧಾನ, ಕಾನೂನು ಮತ್ತು ಹಕ್ಕುಗಳ ರಕ್ಷಣೆ ಮೂಲಕ ಸಮಾನತೆ ಮತ್ತು ಅಲ್ಪಸಂಖ್ಯಾತರ ಸುರಕ್ಷತೆಯನ್ನು ಸಬಲೀಕರಿಸಿದರು.ಮೀಸಲಾತಿ ಮತ್ತು ಸಕಾರಾತ್ಮಕ ಕ್ರಮಗಳ ಮೂಲಕ ಜಾತಿ ಅನ್ಯಾಯಕ್ಕೆ ಸಂಸ್ಥಾತ್ಮಕ ಪರಿಹಾರ ಒದಗಿಸುವುದನ್ನು ಮಹತ್ವವಾಯಿತು.ಸಮಾನತೆ ಕಾನೂನಿನಿಂದಲೇ ಜಾರಿಯಾಗಬೇಕು ಎಂದು ಬಲವಾಗಿ ಒತ್ತಿಹೇಳಿದರು.ಗಾಂಧಿಜಿ ಅವರು ಆಂತರಿಕನವೀಕರಣ ಮತ್ತು

ನೈತಿಕ ಶಕ್ತಿಯಾದರೆ, ಅಂಬೇಡ್ಕರ್ ಅವರು ಕಾನೂನು ಸಮಾನತೆ ಮತ್ತು ರಚನಾತ್ಮಕ ಬದಲಾವಣೆಯಾಗಿದ್ದಾರೆ.ಈ ಎರಡರ ಸಂಯೋಜನೆಯೇ ನ್ಯಾಯಯುತ, ಸಮಾನ ಮತ್ತು ಸುಸ್ಥಿರ ಭಾರತದ ಮಾರ್ಗವಾಗಿರುತ್ತದೆ.ಇಂದಿನ ಅಸಮಾನತೆ, ಸಾಮಾಜಿಕ ಉದ್ವಿಗ್ನತೆ ಮತ್ತು ಪರಿಸರ ಸಂಕಟಗಳ ನಡುವೆಯೂ, ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳ ಸಮನ್ವಯವೇ ಭವಿಷ್ಯಕ್ಕೆ ದಾರಿದೀಪವಾಗಬಹುದು.

## ಗ್ರಂಥಸೂಚಿ


- Abraham, Making the Indian Public: Communication and National Identity in the Early Republic. Oxford University Press, 1998.
- Austin, Granville,The Indian Constitution: Cornerstone of a Nation. Oxford University Press, 1966.
- Brown, Judith M, Gandhi: Prisoner of Hope. Yale University Press, 1989.
- Chakravarti, Uma, Ambedkar and Indian Economy. 2012.
- Chatterjee, Partha,The Nation and Its Fragments: Colonial and Postcolonial Histories. Princeton University Press, 1993.
- Dalton, Dennis, Mahatma Gandhi: Nonviolent Power in Action. Columbia University Press, 1993.
- Govindappa.A.R,The Bhoodan Movement and Gramdan. University of Mysore, 1970.
- Guha, Ramachandra., Gandhi Before India. Penguin Books, 2013.
- Jaffrelot, Christophe, Dr Ambedkar and Untouchability: Analysing and Fighting Caste. Permanent Black, 2005.
- Jalal, Ayesha, Democracy and Authoritarianism in South Asia: A Comparative and Historical Perspective. Cambridge University Press, 1995.
- Jodhka, Surinder.S, Caste in Contemporary India. Routledge India, 2012.
- Kumar, Ravinder, Postcolonialism in South Asia. Oxford University Press, 2011.
- Menon, Ritu, and Kamla Bhasin. Borders and Boundaries: Women in India’s Partition. Kali for Women, 1998.
- Narain, Iqbal, Gandhian Thought: Its Relevance for Contemporary India. Rawat Publications, 1998.
- Omvedt, Gail, Ambedkar: Towards an Enlightened India. Penguin Books, 2004.
- Parekh, Bhikhu, Gandhi’s Political Philosophy: A Critical Examination. Macmillan Press, 1989.
- Roy, Arundhati. The Doctor and the Saint. Navayana, 2014.